**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ ಶಹಾಪೂರ.**

**ಚಾಸಾ : 01  ಪ್ರಾಸಾ : 01**

| | | |
|---|---|---|
| **ಹೆಸರು** | **:** | **ಲಕ್ಷ್ಮೀ** |
| **ತಂದೆ/ ಗಂಡನ ಹೆಸರು** | **:** | **ನಾಗಪ್ಪ** |
| **ವಯಸ್ಸು** | **:** | **36 ವರ್ಷ** |
| **ಉದ್ಯೋಗ** | **:** | **ಕೂಲಿ ಕೆಲಸ** |
| **ವಾಸ** | **:** | **ಹಳಿಸಗರ** |

**ದಿನಾಂಕಃ 27.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಎಪಿಪಿ ರವರಿಂದಃ**

ಚಾಸಾ-4 ಮತ್ತು 5 ರವರು ಗೊತ್ತು, ಚಾಸಾ-6 ನನ್ನ ಗಂಡ.  ಆರೋಪಿತರು ನನ್ನ ಸಂಬಂಧಿಕರು.  ಈಗ ಸುಮಾರು 10 ವರ್ಷಗಳಿಂದ ಅಗ್ನಿಶಾಮಕ ಹಿಂದುಗಡೆ ನಾನು ವಾಸವಾಗಿದ್ದೆ, ಈಗ ಒಂದುವರೆ ವರ್ಷಗಳ ಹಿಂದೆ ಆರೋಪಿತರು ನನ್ನ ಜೊತೆ ಜಗಳವಾಡಿರುತ್ತಾರೆ.  ನನ್ನ ಹಿಂದೆ ಕಬ್ಬಲಿಗ ಜನಾಂಗದ ಜನರು ಇರುತ್ತಾರೆ ಎಂದು ನನ್ನ ಜೊತೆ ಆರೋಪಿತರು ಜಗಳವಾಡಿರುತ್ತಾರೆ.  ಪರಸಪ್ಪ ನನಗೆ ಕಲ್ಲಿನಿಂದ ತಲೆಗೆ ಹೊಡೆದಿರುತ್ತಾನೆ, ಹುಸೇನ್ ಕೈಯಿಂದ ಬೆನ್ನಿಗೆ, ಹೊಟ್ಟೆಗೆ ಹೊಡೆದಿರುತ್ತಾರೆ, ನಾಗಮ್ಮ, ಯಲ್ಲಮ್ಮ ಬಂದು ಸೂಳಿದು ಬಹಳಾ ಆಗಿದೆ ಎಂದು ಕೈಯಿಂದ ಹೊಡೆದು ಸೀರೆ ಎಳೆದಾಡಿರುತ್ತಾರೆ.  ನಂತರ ನಾನು ಪ್ರಜ್ಞೇ ತಪ್ಪಿ ಬಿದ್ದಾಗ ನನಗೆ ಸಿದ್ದಪ್ಪ ಹಾಗೂ ಈಶಪ್ಪ ಇವರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ.  ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.  ಸಾಕ್ಷಿಯು ದೂರಿನಲ್ಲಿ ಇದ್ದ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಆರೋಪಿತರು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಎಪಿಪಿ ಯವರಿಂದಃ**

ಪರಸಪ್ಪ ಹಾಗೂ ಹುಸೇನ್ ನನ್ನ ಕೂದಲು ಹಾಗೂ ಸೀರೆ ಹಿಡಿದು ಎಳೆದಾಗ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಹಾಗೂ ಚಾಸಾ-6 ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೇದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಹೇಳಿ ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಕೆ.ವಿ. ವಕೀಲರಿಂದ ಃ**

ಹುಸೇನಿ ನನ್ನ ನೇಗೆಣಿ ನಾಗಮ್ಮ ತಮ್ಮ ಇರುತ್ತಾನೆ. ಪರಸಪ್ಪ ನನ್ನ ಗಂಡನ ಅಣ್ಣ ಇರುತ್ತಾನೆ. ಯಲ್ಲಮ್ಮ ಹುಸೇನಿ ಹೆಂಡತಿ ಇರುತ್ತಾಳೆ. ಪರಸಪ್ಪ ಹಾಗೂ ನಾಗಮ್ಮ ದಿಗ್ಗಿ ಗ್ರಾಮದಲ್ಲಿ ಇರುತ್ತಾರೆ. ಹುಸೇನಿ ಹಾಗೂ ಯಲ್ಲಮ್ಮ ಶಹಾಪೂರದಲ್ಲಿ ಇರುತ್ತಾರೆ. ಆರೋಪಿತರು ನನ್ನ ಹತ್ತಿರದ ಸಂಬಂಧಿಕರು ಎಂದರೆ ಸರಿ. ಹುಸೇನಿ ಮತ್ತು ಔಲ್ಲಮ್ಮ ಬೆನಕನಹಳ್ಳಿಯಲ್ಲಿ ಹಂದಿ ಸಾಗಾಣಿಕೆ ಮಾಡುತ್ತಾರೆ ಎಂದರೆ ಸರಿ. ನಾನು ಹಾಗೂ ನನ್ನ ಗಂಡ ಹಳಿಸಗರದಲ್ಲಿ ಹಂದಿ ಸಾಗಾಣಿಕೆ ಮತ್ತು ಬಾರಗಿ ಮಾಡಿ ವ್ಯಾಪಾರ ಮಾಡುತ್ತೇವೆ. ಪರಸಪ್ಪ ಹಾಗೂ ನಾಗಮ್ಮ ಹಂದಿ ಸಾಗಾಣಿಕೆ ಮಾಡುತ್ತಾರೆ.

ಜಗಳ ನನ್ನ ಮನೆಯ ಮುಂದೆ ಆಗಿರುತ್ತದೆ. ಜಗಳವಾದಾಗ ನಾನು, ನನ್ನ ಮಗಳು ಹಾಗೂ ಸೊಸೆ ಇದ್ದೇವು. ನನ್ನ ಸೂತ್ತ ಮುತ್ತಲೂ ಸುಮಾರು 20 ಮನೆಗಳು ಇರುತ್ತವೆ, ನನ್ನ ಮನೆಯ ಸೂತ್ತ ಮುತ್ತಲೂ ಸುಮಾರು 500 ಜನ ವಾಸಿರುತ್ತಾರೆ. ಆರೋಪಿತರ ಪೈಕಿ ಮೊದಲು ಹುಸೇನಿ ಮತ್ತು ಪರಸಪ್ಪ ಬಂದಿರುತ್ತಾರೆ. ಆರೋಪಿತರು ನನಗೆ ಅವಾಚ್ಯ

ಶಬ್ದಗಳಿಂದ ಬೈದಿರುತ್ತಾರೆ. ಹುಸೇನಿ ಮತ್ತು ಪರಸಪ್ಪ ನನಗೆ ತಲೆಗೆ ಹೊಡೆದಿರುತ್ತಾರೆ. ಪರಸಪ್ಪ ಕಲ್ಲಿನಿಂದ ಹೊಡೆದಿರುತ್ತಾನೆ. ಹೊಡೆದಿದ್ದರಿಂದ ನನಗೆ ರಕ್ತ ಬಂದಿರುತ್ತದೆ, ರಕ್ತ ಮೈಮೇಲೆ, ಸೀರೆ ಬಿದ್ದಿರುತ್ತದೆ. ಇವರು ಇಬ್ಬರನ್ನು ಬಿಟ್ಟರೇ ಬೇರೆಯವರು ಹೊಡೆದಿರುವುದಿಲ್ಲ. ಜಗಳ ಸುಮಾರು ಒಂದು ತಾಸು ವರೆಗೂ ನಡೆದಿರುತ್ತದೆ. ಜಗಳವಾದಾ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಮೊದಲು ಆಸ್ಪತೆಗೆ ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋದಾಗ 10-11.00 ಗಂಟೆ ಆಗಿತ್ತು. ನಾನು ರಕ್ತ ಹತ್ತಿದ ಬಟ್ಟೆಯನ್ನು ಪೊಲೀಸರಿಗೆ ತೋರಿಸಿತ್ತೇನೆ. ನಾನು ಹಾಗೂ ನನ್ನ ಗಂಡ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಜಗಳ ನಡೆದ ದಿನದಂದೆ ಕೇಸ ಮಾಡಿರುತ್ತೇವೆ. ಪಂಚನಾಮ ಮಾಡಲು ಘಟನೆ ನಡೆದ ದಿನದಂದೆ ಬಂದಿರುತ್ತಾರೆ. ಘಟನಾ ಸ್ಥಳವನ್ನು ನಾನು ಹಾಗೂ ಅಕ್ಕ ಪಕ್ಕದವರು ತೋರಿಸಿರುತ್ತೇವೆ. ಪಂಚರ ಹೆಸರು ನನಗೆ ಗೊತ್ತಿಲ್ಲ. ಅಕ್ಕ ಪಕ್ಕ ಇದ್ದವರು ಸಹಿ ಹಾಕಿರುತ್ತಾರೆ. ಕೂದಲು ಹಿಡಿದು ಜಗ್ಗಿದಾಗ ಕೂದಲು ಕೈಗೆ ಬಂದಿರುತ್ತವೆ. ಕೂದಲುಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ.

ನನಗೆ ಶೇಖಪ್ಪ ಗೊತ್ತು. ಆತನ ವಿರುದ್ದ ಆರೋಪಿತರು ಪ್ರಕರಣ ಹಾಕಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ಯಾದಗಿರಿ ನ್ಯಾಯಾಲಯದಲ್ಲಿ ನಡೆದಿರುತ್ತದೆ ಎಂದರೆ ಸರಿ. ಶೇಖಪ್ಪ ಹಂದಿ ಸಾಗಾಣಿಕೆ ಮಾಡುತ್ತಾನೆ ಎಂದರೆ ಸರಿ. ಶೇಖಪ್ಪ ಮಾತು ಕೇಳಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವದ ಬೇದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ. ಶಹಾಪೂರ**